ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಮಿ|| ಅರ್ಜೀ ನಂಬರ್ 357.

ಅರ್ಜೀದಾರು, ಬೆಂಗಳೂರು ಶಿದ್ದಿಕಟ್ಟೆಯಲ್ಲಿ ಇರುವ ಮುತ್ಯಾ ಶೇತುಮಾಧವಾಚಾರ್ಯ ಮಗ ಶೇಷಾಚಾರ್ಯು, ಮೈನರಾದ ಬೆಂಗಳೂರು ಶಿದ್ದಿಕಟ್ಟೆಯಲ್ಲಿ ಇರುವ ಮುತ್ಯಾ ಶ್ರೀನಿವಾಸಾಚಾರ್ಯ ಮುಕ್ತಳು 1ನೆ ಕೃಷ್ಣಮೂರ್ತಿ, 2ನೆ ಗಂಗಾಬಾಯಿ ಯವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 1ನೆ ಕೃಷ್ಣಮೂರ್ತಿ ವಗೈರೇರಿಗೆ ಚಿಕ್ಕತಂದೆ ಆಗಬೇಕೆಂಬ ಹಕ್ಕಿನಮೇಲೆ ಅರ್ಜಿದಾರ ಶೇಷಾಚಾರ್ಯು ಸದರೀ ಮೈನರನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ ೧೯೦೪ನೆ ಇಸವಿ ಜನವರಿ ತಾರೀಖು 8ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ ೧೯೦೩ನೆ ಇಸವಿ ಡಿಸೆಂಬರ್ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಪಿ. ಸಿಂಗ್ರಾಚಾರ್,
ಸಬ್ ಜಡ್ಜ್.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಅರ್ಜೀ ನಂಬರು 265.

ಮೃತಪಟ್ಟ ನಾರಣ್ಯೆಯ್ಯಂಗಾರ್ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಈಶ್ವರವಳ್ಳಿಯಲ್ಲಿರುವ ಸೋಮಮ್ಮ ನಾರಣ್ಯೆಯ್ಯಂಗಾರ್ ಹೆಂಡತಿ, ಮೈನರ್ ಗಾರ್ಡಿಯರ್ ತಂದೆ ಗೋವಿಂದಾಚಾರ್, ಮೃತಪಟ್ಟ ನಾರಣ್ಯೆಯ್ಯಂಗಾರ್‌ಗೆ ಸೋಮಮ್ಮ ಹೆಂಡತಿಯು ಮತ್ತು ದತ್ತು ಮಗ ವೆಂಕಟಾಚಾರ್ ಇವರುಗಳ ಹಕ್ಕುದಾರಿ ಮೇಲೆ ಚಿಕ್ಕಮಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ನಾರಣ್ಯೆಯ್ಯಂಗಾರ್‌ರವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೆ ಇಸವಿ 7ನೆ ರೆಗ್ಯುಲೇಷ್ಣ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸೋಮಮ್ಮ, ಮೈನರ್ ಗಾರ್ಡಿಯರ್ ತಂದೆ ಗೋವಿಂದಾಚಾರ್ ಯವರ ಅರ್ಜಿಯನ್ನು ಸ್ ೧೯೦೪ನೇ ಇಸವಿ ಫೆಬ್ರವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣ್ಯೆಯ್ಯಂಗಾರ್ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೆ ಇಸವಿ ಡಿಸೆಂಬರ್ ತಿಂಗಳು 15ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜ್.

ಚಿತ್ರದುರ್ಗ ಡಿವಿಜನ್.

ನೋಟಿಸ್.

ಚಿತ್ರದುರ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ, ಮಿರಾಸಾಬಿ ಹಳ್ಳಿ ತಲಾವ್ ಕಂಟ್ರಾಕ್ಟರ್ ರಾಮುಲಿಂಗಂ ಎಂಬುವರಿಗೆ ಪಾವತಿ ಆಗಬೇಕಾಗಿರುವ ರೂ. 8—9—1 ಪೈ ಬಾಕಿ ನಿಂತಿರುತ್ತೆ. ಈ ತಾರೀಖು ಲಾಗಾಯಿತು 3 ತಿಂಗಳೊಳಗಾಗಿ ಮೇಲ್ಕಂಡ ಕಂಟ್ರಾಕ್ಟುದಾರರೇ ಆಗಲಿ ಅಥವಾ ಅವರ ಸರಿಯಾದ ವಾರಸ್ದಾರರೇ ಆಗಲಿ ಚಿತ್ರದುರ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ರೂಬುರೂಬು ಹಾಜರಾಗಿ ಹಣಾ ತೆಗದುಕೊಳ್ಳತಕ್ಕದ್ದು. ತಪ್ಪಿದಲ್ಲಿ ಮೊಬಲಗು ಸರಕಾರಕ್ಕೆ ಜಮಾ ಮಾಡಿಕೊಳ್ಳಲ್ಪಡುತ್ತೆ.

ವೈ. ಶ್ರೀನಿವಾಸರಾವ್,
ಎಗ್ಜಿಕ್ಯೂಟಿವ್ ಇಂಜಿನಿಯರ್.